# ಪುಟ್ಟ ಗಿಳಿಯ ಸಾಹಸ

ಒಮ್ಮೆ ಬೋಧಿಸತ್ವನಾಗಿದ್ದ ಬುದ್ಧ ಪುಟ್ಟ ಗಿಳಿಯಾಗಿ ಹುಟ್ಟಿದ. ಒಂದು ದಿನ ಕಾಡಿನ ಮಧ್ಯದಲ್ಲಿ ಮರದ ಮೇಲಿದ್ದ ತನ್ನ ಗೂಡಿನ ಮೇಲೆ ಬಿರುಗಾಳಿ ಬಂದಪ್ಪಳಿಸಿತು. ಮಿಂಚು ಝಳಪಿಸಿತು. ಗುಡುಗು ಅಬ್ಬರಿಸಿತು. ಒಣಮರವೊಂದಕ್ಕೆ ಸಿಡಿಲು ಬಡಿದು ಬೆಂಕಿ ಹೊತ್ತಿಕೊಂಡಿತು. ಬೆಂಕಿ, ಬಿರುಗಾಳಿ ಸೇರಿ ಇಡೀ ಕಾಡೇ ಹೊತ್ತಿ ಉರಿಯತೊಡಗಿತು.

'ಬೆಂಕಿ, ಬೆಂಕಿ' ಎಂದು ಚೀರಿಡುತ್ತಾ ಪುಟ್ಟ ಗಿಳಿ ಮೇಲಕ್ಕೆ ಜಿಗಿದು ರಕ್ಷಣೆಗಾಗಿ ಹತ್ತಿರದಲ್ಲೆ ಹರಿಯುತ್ತಿದ್ದ ನದಿಯತ್ತ ಭರ್ರಂತ ಹಾರಿತು. ಇತ್ತ ಕಾಡಿನೊಳಗೆ ಬೆಂಕಿಯ ಜ್ವಾಲೆಗೆ ಸಿಲುಕಿದ್ದ ಪ್ರಾಣಿಗಳು ತಪ್ಪಿಸಿಕೊಳ್ಳಲಾಗದೆ ಅಸಹಾಯಕರಾಗಿ ಅತ್ತಿಂದಿತ್ತ ಇತ್ತಿಂದತ್ತ ಓಡುತ್ತಿದ್ದವು. ಹತಾಶ ಪುಟ್ಟ ಗಿಳಿಗೆ ಹೇಗಾದರೂ ಮಾಡಿ ಅವುಗಳನ್ನು ಕಾಪಾಡಬೇಕೆಂಬ ಯೋಚನೆ ಹೊಳೆಯಿತು. ನದಿಗೆ ಹೋಗಿ ಒಮ್ಮೆ ಮುಳುಗಿ ಮೇಲೆದ್ದು ಮತ್ತೆ ದಹಿಸುತ್ತಿದ್ದ ಬೆಂಕಿಯತ್ತ ಸಾಗಿತು.

ಹೊತ್ತಿ ಉರಿಯುತ್ತಿದ್ದ ಕಾಡಿನ ಬೆಂಕಿಯ ಶಾಖದಿಂದ ಇದಕ್ಕೆ ಒಲೆಯ ಮೇಲೆ ಕುಳಿತ ಅನುಭವವಾಗುತ್ತಿತ್ತು. ದಟ್ಟವಾಗಿ ಏಳುತ್ತಿದ್ದ ಹೊಗೆ ಉಸಿರುಗಟ್ಟಿಸುತ್ತಿತ್ತು. ಜೋರಾಗಿ ಬೀಸುತ್ತಿದ್ದ ಗಾಳಿಗೆ ಜ್ವಾಲೆಗಳು ಗಿಳಿಯತ್ತ ಅಪ್ಪಳಿಸುತ್ತಿದ್ದವು. ಹುಚ್ಚೆದ್ದು ಉರಿಯುತ್ತಿದ್ದ ಬೆಂಕಿಯುಂಡೆಗಳ ನಡುವೆ ಗಿಳಿ ಧೈರ್ಯ ತುಂಬಿಕೊಂಡು ಹಾಗೂ ಹೀಗೂ ನುಸುಳಿ ಕಾಡಿನ ಮೇಲ್ಮಧ್ಯೆ ಹಾರಿ ಬಂದು ತನ್ನ ರೆಕ್ಕೆಗಳನ್ನು ಬಡಿಯಿತು. ಗರಿಗಳಲ್ಲಿ ಸೋರುತ್ತಿದ್ದ ಕೆಲ ಹನಿಗಳು ಆ ಅಗಾಧವಾದ ಬೆಂಕಿಯ ಮೇಲೆ ರತ್ನದ ಹರಳುಗಳಂತೆ ಬಿದ್ದು ಸದ್ದಿಲ್ಲದೆ ಮಾಯವಾದವು.

ಪುಟ್ಟ ಗಿಳಿ ಮತ್ತೆ ಆ ಭುಗಿಲೆದ್ದ ಜ್ವಾಲೆಗಳ ಮೇಲೆ, ಕವಿದ ಹೊಗೆಯ ನಡುವೆ ಹಾರುತ್ತ ನದಿಗೆ ಧಾವಿಸಿ ಬಂದು ತಣ್ಣಗೆ ಹರಿಯುತ್ತಿದ್ದ ನೀರಿನಲ್ಲಿ ಮುಳುಗೇಳಿತು. ಉರಿಯುತ್ತಿದ್ದ ಕಾಡಿನತ್ತ ಮತ್ತೆ ಹಾರಿತು. ಹೀಗೆಯೆ ಹಲವು ಬಾರಿ ಉರಿಯುವ ಕಾಡಿನಿಂದ ನದಿಗೆ, ನದಿಯಿಂದ ಉರಿಯುವ ಕಾಡಿಗೆ ಎಡತಾಕಿ ರೆಕ್ಕೆಯಲ್ಲಿ ನೀರು ಮೊಗೆದು ಗರಿಗಳಲ್ಲಿ ಸೋರುವ ಹನಿಗಳನ್ನು ಬೆಂಕಿಯ ಮೇಲೆ ಸಿಂಪಡಿಸುತ್ತಿತ್ತು. ರೆಕ್ಕೆಗಳು ಸುಟ್ಟು ಕರಕಲಾಗಿದ್ದವು. ಪಾದಗಳು ಉರಿಯುತ್ತಿದ್ದವು. ಉಸಿರಾಡಲು ಎದೆ ನೋಯುತ್ತಿತ್ತು. ಕಣ್ಣುಗಳು ಕೆಂಡದಂತೆ ಕೆಂಪಗಾಗಿದ್ದವು. ಆದರೂ ಪುಟ್ಟ ಗಿಳಿ ತನ್ನ ಪ್ರಯತ್ನವನ್ನು ಬಿಡಲಿಲ್ಲ.

ಅದೇ ಸಮಯದಲ್ಲಿ ಮೋಡದ ಮೇಲೆ ದೇವತೆಗಳು ತೇಲುವ ದಂತದ ಅರಮನೆಗಳಲ್ಲಿ ಸಾಗುತ್ತಿದ್ದರು. ಕೆಳಗೆ ಕಾಡಿಗೆ ಬೆಂಕಿ ಹೊತ್ತಿರುವುದನ್ನು, ಪುಟ್ಟ ಗಿಳಿ ನದಿಗೆ ರೆಕ್ಕೆ ಬಡಿದು ಹಾರಿ ಬಂದು ಬೆಂಕಿಯ ಮೇಲೆ ನೀರು ಚಿಮುಕಿಸುತ್ತಿದ್ದುದನ್ನು ನೋಡಿದರು. ಬಾಯ್ತುಂಬ ಜೇನು ಸವಿಯುತ್ತ ಹರ್ಷೋಲ್ಲಾಸದಲ್ಲಿ ತನ್ಮಯರಾಗಿದ್ದ ದೇವತೆಗಳು ಈ ಒಂಟಿ ಪಕ್ಷಿಯ ಸಾಹಸವನ್ನು ಕಂಡು ಮತ್ತಷ್ಟು ನಗಲಾರಂಭಿಸಿದರು. 'ಎಂಥ ಮೂರ್ಖ ಪಕ್ಷಿ' ಎಂದು ಮೂದಲಿಸುತ್ತಿದ್ದರು.

ಆ ದೇವತೆಗಳಲ್ಲಿ ಒಬ್ಬನಿಗೆ ಗಿಳಿಯಮೇಲೆ ಕನಿಕರ ಹುಟ್ಟಿ ಕ್ಷಣಾರ್ಧದಲ್ಲಿ ಚಿನ್ನದ ಹದ್ದಾಗಿ ಮಾರ್ಪಟ್ಟನು. ಗಿಳಿ ಮತ್ತೊಮ್ಮೆ ಉಗುಳುವ ಜ್ವಾಲೆಗಳತ್ತ ಧಾವಿಸುತ್ತಿದ್ದಂತೆಯೆ ಚಿನ್ನದ ಹದ್ದು ಪಕ್ಕ ಬಂದು 'ಹಿಂದೆ ಹೋಗು ಪುಟ್ಟ ಗಿಳಿಯೆ, ನಿನ್ನ ಈ ಕೆಲಸ ವ್ಯರ್ಥವಾದದ್ದು. ಹನಿ ನೀರಿನಿಂದ ಕಾಡಿನ ಬೆಂಕಿ ಆರುವುದಿಲ್ಲ, ಹೊರಡು, ನಿನ್ನ ಜೀವ ಉಳಿಸಿಕೊ, ತಡಮಾಡಬೇಡ' ಎಂದು ಗತ್ತಿನಿಂದಲೇ ಹೇಳಿತು. ಆದರೆ ಪುಟ್ಟ ಗಿಳಿ ಧೃತಿಗೆಡದೆ ಉರಿವ ಕೆನ್ನಾಲಗೆಯ ಮೇಲೆ, ಹೊಗೆಯ ಮಸಕುದಾರಿಯಲ್ಲಿ ಹಾರುತ್ತಲೇ ಇತ್ತು. ತನಗಿಂತಲೂ ಮೇಲೆ ಹಾರುತ್ತಿದ್ದ ಹದ್ದು 'ಮೂರ್ಖ ಗಿಳಿಯೆ ಜೀವ ಉಳಿಸಿಕೊ' ಎಂದು ಒದರುತ್ತಲೇ ಇತ್ತು. 'ಓ ಹೊಳೆವ ಕಣ್ಣುಗಳ ಚಿನ್ನದ ಹದ್ದೇ, ನನಗೆ ನಿನ್ನಿಂದ ಇಂಥ ಸಲಹೆ ಬೇಡ' ಕೆಮ್ಮುತ್ತಿದ್ದ ಗಿಳಿ ಹೇಳಿತು 'ಬಹಳ ಹಿಂದೆ ನನ್ನ ತಾಯಿ ಹೀಗೆ ಸಲಹೆ ನೀಡುತ್ತಿದ್ದಳು, ಈಗ ನನಗೆ ಯಾರಾದರೂ ಸಹಾಯಕ್ಕೆ ಬರುವವರು ಬೇಕು' ಗಿಳಿ ಕೆಮ್ಮುತ್ತಲೇ ಇತ್ತು.

ಚಿನ್ನದ ಹದ್ದಾಗಿ ಬಂದಿದ್ದ ಆ ದೇವತೆಗೆ ತನ್ನ ಮತ್ತು ಮೇಲೆ ತೇಲುವ ಅರಮನೆಯಲ್ಲಿ ಉಡಾಳರಾಗಿ ತಿಂದು ತೇಗುತ್ತಿದ್ದ ಸಹಚರ ದೇವತೆಗಳ ಬಗ್ಗೆ ನಾಚಿಕೆಯೆನ್ನಿಸಿತು. ತಾನು ದೇವತೆಯಾಗಿದ್ದರೂ ಸರಿ ಈ ಧೈರ್ಯವಂತ ಪುಟ್ಟ ಗಿಳಿಯಂತೆ ಇತರರಿಗೆ ಸಹಾಯಮಾಡಬೆಕು ಎನಿಸಿತು. ಆ ಕ್ಷಣವೇ ಚಿನ್ನದ ಹದ್ದಿನ ಮನ ಕರಗಿ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಸುರಿಯಲಾರಂಭಿಸಿತು. ಆ ಕಣ್ಣೀರು ತೊರೆಯಾಗಿ ಹರಿಯಿತು. ಅಲೆಅಲೆಯಾಗಿ ತಂಪೆರೆವ ಮಳೆಯಾಯಿತು. ಕಾಡಿನ ಬೆಂಕಿ ಆರಿತು. ಪ್ರಾಣಿಪಕ್ಷಿಗಳು, ಗಿಡಮರಗಳು ಮಳೆಯಲ್ಲಿ ಮಿಂದು ಒದ್ದೆಯಾದವು. ಕಣ್ಣೀರ ಹನಿ ಬಿದ್ದ ಗಿಳಿಯ ಮೈಮೇಲೆ ಮತ್ತೆ ಬಣ್ಣದ ರೆಕ್ಕೆಗಳು ಮೂಡಿದವು.

ಮಾನವೇತಿಹಾಸದಲ್ಲಿ ಪುಟ್ಟ ಗಿಳಿಯಂತೆ ಕೆಲವರಾದರೂ ಅಸಾಧ್ಯವಾದುದನ್ನು ಕೈಗೆತ್ತಿಕೊಳ್ಳದಿದ್ದರೆ ನಾವು 'ಇಂದು, ಹೀಗೆ' ಇರಲು ಸಾಧ್ಯವಿರುತ್ತಿರಲಿಲ್ಲ ಅಲ್ಲವೆ?

■ ಮೂಚಿ

## ಮಾತೇ ಮುತ್ತು

★ ಎಲ್ಲರಿಗೂ ಸ್ನೇಹಿತನಾಗಿರುವವನಿಗೆ ಯಾರೂ ಸ್ನೇಹಿತರಿರುವುದಿಲ್ಲ.

-ಅರಿಸ್ಟಾಟಲ್

★ ಇತರರ ಸಾಧನೆಗಳನ್ನು ಶ್ಲಾಘಿಸಿ. ಆಗ ನಿಮ್ಮ ಸ್ವಂತ ಪ್ರಯತ್ನಗಳನ್ನು ನೀವೇ ಪ್ರೋತ್ಸಾಹಿಸಿದಂತಾಗುತ್ತದೆ.

-ನಾಗಾರ್ಜುನ

★ ಒಳ್ಳೆಯ ನಿರ್ಧಾರವನ್ನು ಜ್ಞಾನದ ಆಧಾರದಲ್ಲಿ ತೆಗೆದುಕೊಳ್ಳಲಾಗುತ್ತದೆ; ಸಂಖ್ಯೆಯ ಆಧಾರದಲ್ಲಿ ಅಲ್ಲ.

—ಪ್ಲೆಟೋ

★ ಹೊಸ ಆಲೋಚನೆಗಳಿಗೆ ಹಾತೊರೆಯಬೇಡಿ. ಈಗ ಇರುವ ಆಲೋಚನೆಗಳಿಂದ ಮುಕ್ತರಾದರೆ ಅದೇ ಸಾಕು.

—ರಮಣ ಮಹರ್ಷಿ

★ ನೆಮ್ಮದಿ ಬೇಕೆಂದರೆ ಜನಪ್ರಿಯತೆಯನ್ನು ದೂರವಿಡಿ.

—ಅಬ್ರಹಾಂ ಲಿಂಕನ್

★ ನಿನ್ನೆ ಎನ್ನುವುದು ಇಂದಿನ ನೆನಪು; ನಾಳೆ ಎನ್ನುವುದು ಇಂದಿನ ಕನಸು.

-ಖಲೀಲ್ ಗಿಬ್ರಾನ್

★ ಆತ್ಮವಿಶ್ವಾಸವೆಂದರೆ ಅಜ್ಞಾನ. ನೀವು ಅಹಂಕಾರ ಹೊಂದಿದ್ದೀರಿ ಎಂದಾದರೆ ನಿಮಗೆ ಗೊತ್ತಿಲ್ಲದ್ದು ಇನ್ನೂ ಇದೆ ಎಂದರ್ಥ.

—ಇಯಾನ್ ಕಾಲ್ಪರ್

★ ಬದುಕಲು ಎರಡೇ ದಾರಿಗಳಿವೆ. ಒಂದೋ, ಯಾವುದೂ ಪವಾಡಗಳಲ್ಲ ಎಂದು ಬದುಕಿ. ಇಲ್ಲವೇ ಎಲ್ಲವೂ ಪವಾಡ ಎಂದು ತಿಳಿದುಕೊಂಡು ಬದುಕಿ.

—ಆಲ್ಬರ್ಟ್ ಐನ್‌ಸ್ಟೀನ್

★ ಸಮಾಜವು ತಿಳುವಳಿಕೆ ಹೊಂದುವುದಕ್ಕಿಂತ ವೇಗವಾಗಿ, ವಿಜ್ಞಾನವು ಜ್ಞಾನ ಸಂಪಾದನೆ ಮಾಡುತ್ತಿದೆ ಎನ್ನುವುದೇ ಜೀವನದ ಅತ್ಯಂತ ದುಃಖದಾಯಕ ಸಂಗತಿ.

—ಐಸಾಕ್ ಅಸಿಮೊವ್

★ ನಾನು ಯಾರಿಗೂ ಏನನ್ನೂ ಕಲಿಸಲಾರೆ; ಅವರು ಯೋಚಿಸುವಂತೆ ಮಾತ್ರ ಮಾಡಬಲ್ಲೆ.

—ಸಾಕ್ರೆಟಿಸ್

★ ಜೀವನ ಕಠಿಣ. ನೀವು ಮೂರ್ಖರಾಗಿದ್ದರೆ ಅದು ಇನ್ನೂ ಕಠಿಣ.

—ಜಾನ್ ವೇಯ್ನ್

★ ಉದ್ಧಟತನವುಳ್ಳ ಪಂಡಿತರಾಗಬೇಡಿ. ಪಾಂಡಿತ್ಯ ಮತ್ತು ಉದ್ಧಟತನ ಯಾವತ್ತೂ ಒಟ್ಟಿಗೆ ವಾಸಿಸಲಾರದು.

-ಉಮರ್ ಬಿನ್ ಖತ್ತಾಬ್

★ ಸಮಸ್ಯೆ ಅರ್ಥವಾಗಬೇಕೆಂದರೆ, ಉತ್ತರಕ್ಕಾಗಿ ಆಸೆ ಪಡುವುದರಿಂದ ಮುಕ್ತರಾಗಿ.

—ಜಿಡ್ಡು ಕೃಷ್ಣಮೂರ್ತಿ

★ ಮಣ್ಣು ಮತ್ತು ಅರಣ್ಯಗಳನ್ನು ನಾಶ ಮಾಡಿದರೆ ನಿಮ್ಮ ದೇಶವನ್ನು ನೀವೇ ನಾಶ ಮಾಡಿದಂತೆ.

—ಫ್ರಾಂಕ್ಲಿನ್ ರೂಸ್‌ವೆಲ್ಟ್